S. C. No. 10/2019
PW.34
**ಎಸ್.ಸಿ. 10/2019**

**ದೋ.ಸಾ. : 44 ಫ್ರಾ.ಸಾ. : 34**

**ದಿನಾಂಕಃ 03-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-**

18. 2 ಮತ್ತು 3 ನೇ ಆರೋಪಿತರು ಠಾಣೆಯಲ್ಲಿ ನೀಡಿದ ಸ್ವ-ಖುಷಿ ಹೇಳಿಕೆಯ ಸಂಪೂರ್ಣ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ಸದರಿಯವರ ಸ್ವ-ಖುಷಿ ಹೇಳಿಕೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ನಾವು ಸ್ಥಳಕ್ಕೆ ಹೋಗುವಾಗ, ಆ್ಯಂಬುಲೆನ್ಸ್ ನಲ್ಲಿ ವೈದ್ಯರು ಹಾಗೂ ಅವರ ಸಹಾಯಕರು ಇದ್ದರು, ಬಸ್ಸಿನಲ್ಲಿ ನಾವು 9 ಜನ ಪೊಲೀಸರು, ಸುಮಾರು 8 ಜನ ಡಿ.ಎ.ಆರ್. ಸಿಬ್ಬಂದಿಗಳು, 2 ಮತ್ತು 3 ನೇ ಆರೋಪಿತರು, ಇಬ್ಬರು ಪಂಚರು, ಮೃತನ ಇಬ್ಬರು ಸಂಬಂಧಿಕರು ಹಾಗೂ ತನಿಖಾಧಿಕಾರಿಗಳು ಇದ್ದರು, ಜೀಪಿನಲ್ಲಿ ಚಾಲಕ ಮಾತ್ರ ಇದ್ದರು. ನಮ್ಮ ಠಾಣೆಯಿಂದ ಉಳವಿ ಚೆಕ್-ಪೋಸ್ಟ್ ಸುಮಾರು 50 ರಿಂದ 55 ಕಿ.ಮೀ. ದೂರವಿರುತ್ತದೆ. ಅಣಶಿಯ ವರೆಗೆ ಸಾಮಾನ್ಯ ರಸ್ತೆಯಿದ್ದು, ಅಣಶಿ ಚೆಕ್-ಪೋಸ್ಟ್ ನಿಂದ ತಿರುವುಗಳಿಂದ ಕೂಡಿದ ರಸ್ತೆ ಇರುತ್ತದೆ. ತಿರುವುಗಳಿಂದ ಕೂಡಿದ ರಸ್ತೆಯು 1 ರಿಂದ 2 ಕಿ.ಮೀ. ಮಾತ್ರ ಇರುತ್ತದೆ. ನಾವು ಠಾಣೆಯಿಂದ ಹೊರಟು ಉಳವಿ ಚೆಕ್-ಪೋಸ್ಟ್ ಬಳಿ ತಲುಪಿದಾಗ ಬೆಳಿಗ್ಗೆ 11.45 ಗಂಟೆಯಾಗಿರುತ್ತದೆ.

19. ನಾವು ಆಕಳಗವಿ ಅರಣ್ಯ ಪ್ರದೇಶದಲ್ಲಿ ಸುಮಾರು 2.5 ಕಿ.ಮೀ. ಕಾಲ್ನಡಿಗೆಯಲ್ಲಿ ಹೋದಾಗ ಸುಮಾರು 10 ನಿಮಿಷಗಳ ಕಾಲವಾಗಿರುತ್ತದೆ. ಆನಂತರ 1.5 ಕಿ.ಮೀ. ಕಾಡಿನ ಕಡಿದಾದ ರಸ್ತೆಯಲ್ಲಿ ಹೋಗಲು ಸುಮಾರು 10 ನಿಮಿಷಗಳ ಕಾಲವಾಗಿರುತ್ತದೆ. ನಾವು ಘಟನಾ ಸ್ಥಳಕ್ಕೆ ಕಾಲ್ನಡಿಗೆಯಲ್ಲಿ ಹೋಗುವಾಗ ನಮ್ಮೊಂದಿಗೆ ಅರಣ್ಯ ಇಬ್ಬರು ಸಿಬ್ಬಂದಿಗಳೂ ಸಹ ಬಂದಿದ್ದರು. ಘಟನಾ ಸ್ಥಳಕ್ಕೆ ತಲುಪಿದಾಗ ಸುಮಾರು 12.00 ಗಂಟೆಯಾಗಿತ್ತು. ಸಮತಟ್ಟಾದ ಜಾಗದಿಂದ ಎಷ್ಟು ಅಡಿ ಆಳದಲ್ಲಿ ಶವ ಬಿದ್ದಿತ್ತು ಎಂದರೆ ಸಾಕ್ಷಿಯು, ಸದರಿ ಪ್ರದೇಶದಲ್ಲಿ ನಿರ್ದಿಷ್ಟವಾದ ಸಮತಟ್ಟಾದ ಜಾಗ ಇರುವುದಿಲ್ಲ ಎಂದು ನುಡಿಯುತ್ತಾರೆ. ಶವ ಬಿದ್ದ ಸ್ಥಳಕ್ಕೆ ಯಾವುದೇ ದ್ವಿಚಕ್ರ ವಾಹನ ಅಥವಾ ಇತರೇ ವಾಹನಗಳು ಹೋಗಲು ಸಾಧ್ಯವಿಲ್ಲ. ನಾವು ಸ್ಥಳ ತಲುಪಿದಾಗ ಆರೋಪಿತರು ಶವವನ್ನು ತೋರಿಸಿರುತ್ತಾರೆ ಹಾಗೂ ನಮ್ಮೊಂದಿಗೆ ಇದ್ದ ಮೃತನ

ಅಣ್ಣನಾದ ರಾಜೇಶ ಮತ್ತು ಮೃತನ ಹೆಂಡತಿಯ ತಮ್ಮನಾದ ರಾಹುಲ್ ಶವವನ್ನು ನೋಡಿ ಗುರುತಿಸಿರುತ್ತಾರೆ. ಶವವನ್ನು ನೋಡಿದಾಗ, ಶವ ಕೊಳೆತಿತ್ತು ಹಾಗೂ ಊದಿಕೊಂಡಿತ್ತು ಎಂದರೆ ಸಾಕ್ಷಿಯು ಶವವು ಸಂಪೂರ್ಣ ಕೊಳೆತಿರಲಿಲ್ಲ ಹಾಗೂ ಸಂಪೂರ್ಣವಾಗಿ ಊದಿಕೊಂಡಿರಲಿಲ್ಲ ಎಂದು ನುಡಿಯುತ್ತಾರೆ.

20. ಶವ ಬಿದ್ದ ಜಾಗದಿಂದ ಟೀ-ಶರ್ಟ್ ಹಾಗೂ ಬನಿಯಾನ್ ಎಷ್ಟು ದೂರದಲ್ಲಿ ಬಿದ್ದಿತ್ತು ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಆದರೆ, ಶವದ ಹತ್ತಿರದಲ್ಲಿಯೇ 4-5 ಅಡಿ ದೂರದಲ್ಲಿ ಬಿದ್ದಿದ್ದವು ಎಂದು ನುಡಿಯುತ್ತಾರೆ. ಮೊದಲಿಗೆ ಶವ ಬಿದ್ದ ಜಾಗದ ಪಂಚನಾಮೆ, ನಂತರ ಮೃತನ ಕಣ್ಣಿಗೆ ಬಟ್ಟೆ ಕಟ್ಟಿದ ಸ್ಥಳದ ಪಂಚನಾಮೆ, ನಂತರ ಕತ್ತಿಯಿಂದ ಹಲ್ಲೆ ಮಾಡಿದ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇವೆ. ನಂತರ 3 ನೇ ಆರೋಪಿಯು ಮೋಟಾರು ಸೈಕಲ್ ನಿಲ್ಲಿಸಿಟ್ಟ ಸ್ಥಳದ ಪಂಚನಾಮೆ ಮಾಡಿರುತ್ತೇವೆ ಹಾಗೂ ನಂತರ 2 ನೇ ಆರೋಪಿಯು ಕಾರನ್ನು ನಿಲ್ಲಿಸಿಟ್ಟ ಸ್ಥಳದ ಪಂಚನಾಮೆ ಮಾಡಿರುತ್ತೇವೆ. ಮೋಟಾರು ಸೈಕಲ್ ನಿಲ್ಲಿಸಿಟ್ಟ ಸ್ಥಳದಿಂದ ಶವ ಬಿದ್ದ ಸ್ಥಳ ಸುಮಾರು 360 ಮೀ. ದೂರವಿರುತ್ತದೆ. ಶವ ಬಿದ್ದ ಸ್ಥಳದಿಂದ ಕಣ್ಣಿಗೆ ಬಟ್ಟೆ ಕಟ್ಟಿದ ಸ್ಥಳವು 200 ಅಡಿಗಳಷ್ಟು ದೂರವಿರುತ್ತದೆ. ಶವ ಬಿದ್ದ ಸ್ಥಳದಿಂದ ಹಲ್ಲೆ ಮಾಡಿದ ಸ್ಥಳವು 150 ಅಡಿ ದೂರವಿರುತ್ತದೆ. ಹಲ್ಲೆ ಮಾಡಿದ ಸ್ಥಳದಲ್ಲಿ ಹಾಗೂ ಅಲ್ಲಿಂದ ಶವ ಬಿದ್ದ ಸ್ಥಳದವರೆಗೆ ರಕ್ತದ ಕಲೆಗಳು ಕಂಡುಬಂದಿರುವುದಿಲ್ಲ. ಘಟನಾ ಸ್ಥಳದಲ್ಲಿ ಶವ ತನಿಖಾ ವರದಿಯನ್ನು ಮಾಡಿರುತ್ತಾರೆ, ಆದರೆ ಸದರಿ ಪ್ರಕ್ರಿಯೆಯಲ್ಲಿ ನಾನು ಭಾಗವಹಿಸಿರುವುದಿಲ್ಲ. ಶವ ತನಿಖಾ ವರದಿಯನ್ನು ಚಾಸಾ-47 ಮಂಜುನಾಥ ಗೊಂಡ ರವರು ಮಾಡಿರುತ್ತಾರೆ. ಶವ ತನಿಖಾ ವರದಿಯನ್ನು 12.30 ಗಂಟೆಗೆ ಪ್ರಾರಂಭಿಸಿ 2.00 ಗಂಟೆಯವರೆಗೆ ಮಾಡಿರುತ್ತಾರೆ. ನಮ್ಮ ಜೊತೆಯಲ್ಲಿ ಬಂದ ಪಂಚರ ಸಮಕ್ಷಮದಲ್ಲಿ ಶವ ತನಿಖಾ ವರದಿಯನ್ನು ಬರೆಯಲಾಗಿರುತ್ತದೆ.

21. ಶವ ಬಿದ್ದ ಸ್ಥಳದ ಪಂಚನಾಮೆಯನ್ನು ಠಾಣೆಯಿಂದ ಹೊರಟಾಗಲೇ ಬೆಳಿಗ್ಗೆ 9.45 ರಿಂದ ಪ್ರಾರಂಭಿಸಿ, ಮಧ್ಯಾಹ್ನ 12.15 ಗಂಟೆಗೆ ಮುಗಿಸಿರುತ್ತೇವೆ. ನಾವು ಠಾಣೆಯಿಂದ ಹೊರಟಾಗ ವಾಹನ ಹತ್ತಿದ ಕೂಡಲೇ ಪಂಚನಾಮೆ ಪ್ರಾರಂಭಿಸಿರುತ್ತೇವೆ. ಸಾಮಾನ್ಯವಾಗಿ ಚಲಿಸುವ ವಾಹನಗಳಲ್ಲಿ ಅಕ್ಷರಗಳನ್ನು ಸ್ಪಷ್ಟವಾಗಿ ಬರೆಯಲು ಸಾಧ್ಯವಾಗುವುದಿಲ್ಲ ಎಂದರೆ ಸರಿ. ನಿಪಿ-11 ಪಂಚನಾಮೆಯನ್ನು ನೋಡಿದಾಗ, ಅದು ಒಂದೇ ಸ್ಥಳದಲ್ಲಿ ಕುಳಿತು ಬರೆದಂತೆ ಕಾಣುತ್ತದೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋಗುವಾಗ ನಮ್ಮ ಜೊತೆಯಲ್ಲಿ ಲ್ಯಾಪ್-

ಟಾಪ್ ಮತ್ತು ಪ್ರಿಂಟರ್ ಗಳನ್ನೂ ಸಹ ತೆಗೆದುಕೊಂಡು ಹೋಗಿರುತ್ತೇವೆ. ನಿಪಿ–11, ನಿಪಿ–18, ನಿಪಿ–21 ಪಂಚನಾಮೆಗಳನ್ನು ಕೈಯಲ್ಲಿ ಬರೆದಿರುವುದೋ ಅಥವಾ ಗಣಕೀಕರಿಸಿದ್ದೀರಾ ಎಂದರೆ ಸಾಕ್ಷಿಯು ನಿಪಿ–11 ಪಂಚನಾಮೆಯನ್ನು ನನ್ನ ಹಸ್ತಾಕ್ಷರಗಳಿಂದ ಬರೆದಿರುತ್ತೇನೆ. ಉಳಿದ ಎರಡು ಪಂಚನಾಮೆಗಳನ್ನು ನಮ್ಮ ಇತರ ಸಿಬ್ಬಂದಿಗಳು ಬರೆದಿರುತ್ತಾರೆ. ಸದರಿ ಪಂಚಾನಮೆಗಳನ್ನು ಲ್ಯಾಪ್ ಟಾಪ್ ನಲ್ಲಿ ಗಣಕೀಕರಿಸಿ, ಪ್ರಿಂಟ್ ಮಾಡಿ, ಸಹಿ ಪಡೆಯಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಘಟನಾ ಸ್ಥಳಕ್ಕೆ ಹೋಗಲು ವಾಹನಗಳಿಗೆ ಅವಕಾಶವಿರಲಿಲ್ಲ ಹಾಗೂ ಸ್ಥಳದಲ್ಲಿ ವಿದ್ಯುತ್ ಸಹ ಇರಲಿಲ್ಲ ಎಂದು ನುಡಿಯುತ್ತಾರೆ.

22. ಶವ ಬಿದ್ದ ಸ್ಥಳದಿಂದ ಕಾರು ನಿಲ್ಲಿಸಿಟ್ಟ ಸ್ಥಳವು 2 ರಿಂದ 3 ಕಿ.ಮೀ. ದೂರವಾಗುತ್ತದೆ. ನಿಪಿ–11 ಶವ ಬಿದ್ದ ಸ್ಥಳದ ಮತ್ತು ನಿಪಿ–18 ಕಣ್ಣಿಗೆ ಬಟ್ಟೆ ಕಟ್ಟಿದ ಮತ್ತು ಹಲ್ಲೆ ಮಾಡಿದ ಸ್ಥಳದ ಪಂಚನಾಮೆಗಳನ್ನು ಬರೆದು ಮುಗಿಸಿದಾಗ ಸುಮಾರು 3.45 ಗಂಟೆಯಾಗಿರುತ್ತದೆ. ಸ್ಥಳಕ್ಕೆ ಒಬ್ಬರು ವೈದ್ಯರು ಹಾಗೂ ಸಹಾಯಕರು ಬಂದಿದ್ದರು. ಮರಣೋತ್ತರ ಪರೀಕ್ಷೆಯನ್ನು 2.30 ರಿಂದ 4.00 ಗಂಟೆಯವರೆಗೆ ಮಾಡಿರುತ್ತಾರೆ. ಶವ ಬಿದ್ದ ಸ್ಥಳದಿಂದ ಬೈಕ್ ನಿಲ್ಲಿಸಿದ ಸ್ಥಳವು ನಡೆದುಕೊಂಡು ಹೋದರೆ ಸುಮಾರು 1 ಕಿ.ಮೀ. ದೂರವಾಗುತ್ತದೆ. ಬೈಕ್ ನಿಲ್ಲಿಸಿಟ್ಟ ಸ್ಥಳದಿಂದ ಆಕಳಗವಿಗೆ ಹೋಗುವ ರಸ್ತೆ ಇರುತ್ತದೆ. ಸದರಿ ಸ್ಥಳದಲ್ಲಿ ಬೈಕ್ ನ ಚಕ್ರದ ಗುರುತುಗಳು ಇದ್ದವಾ? ಎಂದರೆ ಸಾಕ್ಷಿಯು ಚಕ್ರದ ಗುರುತುಗಳು ಇದ್ದವು, ಆದರೆ ಅವು ಬೈಕ್‌ನದ್ದೆಯಾ ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸ್ಥಳದಲ್ಲಿದ್ದ ಟಯರ್ ಮಾರ್ಕ್ ಗಳಿಗೆ ಸಂಬಂಧಿಸಿದಂತೆ ಯಾವುದೇ ಫೋಟೊ ತೆಗೆದಿರುವುದಿಲ್ಲ. ಬೈಕ್ ನಿಲ್ಲಿಸಿಟ್ಟ ಸ್ಥಳದ ಪಂಚನಾಮೆಯು 3.45 ಗಂಟೆಗೆ ಮುಗಿದಿರುತ್ತದೆ. ಮೋಟಾರು ಬೈಕ್ ನಿಲ್ಲಿಸಿಟ್ಟ ಸ್ಥಳದಿಂದ ಕಾರು ನಿಲ್ಲಿಸಿಟ್ಟ ಸ್ಥಳವು ಸುಮಾರು 2 ಕಿ.ಮೀ. ದೂರವಿರುತ್ತದೆ. ಅಲ್ಲಿಗೆ ಸೇರಲು ಸುಮಾರು 10–15 ನಿಮಿಷ ಬೇಕಾಗುತ್ತದೆ. ಕಾರು ನಿಲ್ಲಿಸಿಟ್ಟ ಸ್ಥಳದ ಪಂಚನಾಮೆ ಮುಗಿಸುವಾಗ ಸುಮಾರು 5.30 ಗಂಟೆಯಾಗಿತ್ತು.

23. ಶವ ಬಿದ್ದ ಸ್ಥಳದಿಂದ ಬೈಕ್ ನಿಲ್ಲಿಸಿಟ್ಟ ಸ್ಥಳದ ಪಂಚನಾಮೆ ಮಾಡಿ ನಂತರ ಕಾರು ನಿಲ್ಲಿಸಿಟ್ಟ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುತ್ತೇವೆ. ಬೈಕ್ ನಿಲ್ಲಿಸಿಟ್ಟ ಸ್ಥಳದ ವರೆಗೆ ಇತರ ವಾಹನಗಳು ಹೋಗುತ್ತದೆ ಎಂದರೆ ಸರಿಯಲ್ಲ. ಬೈಕ್ ನಿಲ್ಲಿಸಿಟ್ಟ ಸ್ಥಳಕ್ಕೆ ಬೈಕನ್ನು ಬಿಟ್ಟು ಬೇರೆ ವಾಹನಗಳು ಹೋಗುವುದಿಲ್ಲ. ಬೈಕ್ ನಿಲ್ಲಿಸಿಟ್ಟ ಸ್ಥಳದಲ್ಲಿ ಹಲವಾರು ಟಯರಿನ ಗುರುತುಗಳು ಇದ್ದು, ಆ ದಿನ

ಮಳೆಯಿಂದಾಗಿ ಮಣ್ಣು ತೇವವಾಗಿದ್ದ ಕಾರಣ, ಇಂತಹದ್ದೇ ಬೈಕ್ ಎಂದು ಹೇಳಲು ಬರುತ್ತಿರಲಿಲ್ಲ. ಉಳವಿ ಚೆಕ್-ಪೋಸ್ಟ್ ನಿಂದ ಕಾರವಾರಕ್ಕೆ ಬರಲು ಸಂಜೆ 6.45 ಗಂಟೆಯಾಗಿರುತ್ತದೆ. ನಾವು ನೇರವಾಗಿ ಸಿವಿಲ್ ಆಸ್ಪತ್ರೆಗೆ ಹೋಗಿರುವುದಿಲ್ಲ. ಸಿವಿಲ್ ಆಸ್ಪತ್ರೆಯ ಬಳಿ ಪಂಚನಾಮೆ ಮಾಡಲು ಹೋದಾಗ ಸಂಜೆ ಸುಮಾರು 7.00 ಗಂಟೆಯಾಗಿತ್ತು. ಘಟನಾ ಸ್ಥಳದ ಪಂಚನಾಮೆಯ ಕಾಲಕ್ಕೆ ತೆಗೆದ ನಿಪಿ-13, 14, 16, 17, 19, 20, 22, 23, 25 ಫೋಟೊಗಳಲ್ಲಿ ನಾನು ಇರುವುದಿಲ್ಲ. ಆದರೆ ನಿಪಿ-26 ನೇ ಫೋಟೊದಲ್ಲಿರುತ್ತೇನೆ. ದಿ.23-10-2018 ರಂದು ನಾವು ಠಾಣೆಯಿಂದ ಹೊರಟು ಘಟನಾ ಸ್ಥಳಕ್ಕೆ ಹೋಗಿ ಪಂಚರ ಸಮಕ್ಷಮ ಪಂಚನಾಮೆಗಳನ್ನು ಮಾಡಿ, ಫೋಟೊ ತೆಗೆದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎಲ್ಲಾ ಪಂಚನಾಮೆಗಳನ್ನು ನಾವು ಠಾಣೆಯಲ್ಲಿಯೇ ಬರೆದು ಪಂಚರ ಸಹಿಗಳನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ.

24. ಸಿವಿಲ್ ಆಸ್ಪತ್ರೆಯ ಬಳಿ ನಾವು ಒಂದು ಪಂಚನಾಮೆಯನ್ನು ಮಾಡಿರುತ್ತೇವೆ. ಸದರಿ ಪಂಚನಾಮೆಯು ಆರೋಪಿಯು ಪ್ರೇಮ್ ಕುಮಾರನನ್ನು ಕರೆದುಕೊಂಡು ಹೋದ ಸ್ಥಳ ಮತ್ತು ಬೈಕ್ ನಿಲ್ಲಿಸಿಟ್ಟ ಸ್ಥಳದ ಪಂಚನಾಮೆಯಾಗಿರುತ್ತದೆ. ನಿಪಿ-2 ಮತ್ತು 3 ಫೋಟೊಗಳಲ್ಲಿ ನಾನು ಇರುವುದಿಲ್ಲ. ನಾವು ಸಿವಿಲ್ ಆಸ್ಪತ್ರೆಯ ಬಳಿ ಹೋದಾಗ, ಅಲ್ಲಿ ಸಿ.ಸಿ.ಟಿ.ವಿ ಇದ್ದ ಬಗ್ಗೆ ನಾವು ಪರಿಶೀಲನೆ ಮಾಡಿರುವುದಿಲ್ಲ. ನಾವು ಸಿವಿಲ್ ಆಸ್ಪತ್ರೆಯ ಬಳಿ ಹೋಗಿಲ್ಲ ಹಾಗೂ ಸಲ್ಲಿ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

**ನ್ಯಾಯಾಲಯದ ಅವಧಿ ಮುಗಿದ ಕಾರಣ, ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ